# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆರಡನೆಯ ಅಧಿವೇಶನ

**<u>ಕಾರ್ಯಕಲಾಪಗಳ ಪಟ್ಟಿ</u>**

**ಬುಧವಾರ, ದಿನಾಂಕ: 30ನೇ ನವೆಂಬರ್, 2016**
**(ಸಮಯ: ಬೆಳಗ್ಗೆ 11.00 ಗಂಟೆಗೆ)**

******

### 01. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಎಂಟನೆಯ ಪಟ್ಟಿ
ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಎಂಟನೆಯ ಪಟ್ಟಿ

### 02. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವುದು:-

**01. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2016**
**02. ಕರ್ನಾಟಕ ಕೆಲವು ಸ್ಥಳಗಳ ಹೆಸರುಗಳನ್ನು ಬದಲಾಯಿಸುವ ವಿಧೇಯಕ, 2016**
**03. ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2016**
**04. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಅರಣ್ಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ಹಾಗೂ ಸ್ಥಳನಿಯುಕ್ತಿಗಳ ನಿಯಂತ್ರಣ) ವಿಧೇಯಕ, 2016**

### 03. ವಿತ್ತೀಯ ಕಾರ್ಯಕಲಾಪಗಳು

**ಶ್ರೀ ಸಿದ್ಧರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) ಅವರು:-**

(ಅ) 2016-17ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯ ವಾರ್ಷಿಕ ಪರಿಶೀಲನಾ ವರದಿಯನ್ನು ಒಪ್ಪಿಸುವುದು.

(ಆ) ಭಾರತ ಸಂವಿಧಾನ 205(1)(ಎ)ರ ಅನುಚ್ಛೇದದ ಮೇರೆಗೆ 2016-17ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಕಂತನ್ನು) ಒಪ್ಪಿಸುವುದು.

..2

## 04. ಗಮನ ಸೆಳೆಯುವ ಸೂಚನೆಗಳು

**ಅ) ಶ್ರೀ ಪುಟ್ಟಣ್ಣ** ಅವರು ರಾಜ್ಯದ ಅನುದಾನಿತ ಪ್ರೌಢ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹಾಗೂ ಹಾಜರಾತಿ ಕೊರತೆಯನ್ನು ಕಾಪಾಡಲು ಶಿಕ್ಷಕರುಗಳು ವಿಫಲವಾಗಿರುವ ಕಾರಣದಿಂದ ವೇತನಾನುದಾನ ಹಿಂಪಡೆದು ಅವೈಜ್ಞಾನಿಕವಾಗಿ ಹೊರಡಿಸಿರುವ ಆದೇಶವನ್ನು ಹಿಂಪಡೆಯುವ ಬಗ್ಗೆ **ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರ** ಗಮನ ಸೆಳೆಯುವುದು.

**ಆ) ಶ್ರೀಯುತರುಗಳಾದ: ಕೆ.ಸಿ. ಕೊಂಡಯ್ಯ, ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ, ಕೆ. ಪ್ರತಾಪ ಚಂದ್ರ ಶೆಟ್ಟಿ, ಬಸನಗೌಡ ಆರ್. ಪಾಟೀಲ್ (ಯತ್ನಾಳ್), ಎಂ.ಕೆ. ಪ್ರಾಣೇಶ್ ಹಾಗೂ** ಇತರರುಗಳು ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯಡಿ ಸ್ಥಳೀಯ ಸಂಸ್ಥೆಗಳ ಸಾಂವಿಧಾನಿಕ ಹಕ್ಕನ್ನು ಉಳಿಸಿಕೊಳ್ಳುವ ಮತ್ತು ಜಾರಿಗೊಳಿಸುವ ನಿಟ್ಟಿನಲ್ಲಿ ಶ್ರೀ ರಮೇಶ್ ಕುಮಾರ್ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ **ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ** ಗಮನ ಸೆಳೆಯುವುದು.

## 05. ನಿಯಮ 330ರ ಮೇರೆಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಅವರು ರಾಜ್ಯದ ಗ್ರಾಮ ಪಂಚಾಯತ್‌ಗಳಲ್ಲಿ ಪ್ರಾರಂಭಿಸಿರುವ "ಪಂಚಾಯತ್-100 ಬಾಪೂಜಿ ಸೇವಾ ಕೇಂದ್ರ"ಗಳಲ್ಲಿ ಗಣಕ ಯಂತ್ರ-ಪ್ರಿಂಟರ್, ಪೀಠೋಪಕರಣ ಹಾಗೂ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸದಿರುವ ಬಗ್ಗೆ ಪ್ರಸ್ತಾಪಿಸುವುದು. **(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

## 06. ಮಹದಾಯಿ ಹಾಗೂ ಕಳಸಾ ಬಂಡೂರಿ ಯೋಜನೆಗಳ ನೀರಿನ ಸಮಸ್ಯೆಗಳ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.

## 07. ನಿಯಮ 68ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ

| | |
|---|---|
| **ಶ್ರೀಯುತರುಗಳಾದ:**<br><br>**ಅಮರನಾಥ ಪಾಟೀಲ್**<br>**ಬಿ.ಜಿ. ಪಾಟೀಲ್**<br>**ಕೆ.ಬಿ. ಶಾಣಪ್ಪ**<br>**ರಘುನಾಥರಾವ್ ಮಲ್ಕಾಪೂರೆ** | ಹೈದ್ರಾಬಾದ್-ಕರ್ನಾಟಕ ಭಾಗದ ಆರು ಜಿಲ್ಲೆಗಳಿಗೆ ಸಂವಿಧಾನದ ಕಲಂ 371(ಜೆ) ತಿದ್ದುಪಡಿ ತಂದು ವಿಶೇಷವಾದಂತಹ ಸ್ಥಾನಮಾನ ನೀಡಲಾಗಿದ್ದರೂ ಈ ಭಾಗದ ಜನರಿಗೆ ವೃತ್ತಿಪರ ಶಿಕ್ಷಣದಲ್ಲಿ ಮೀಸಲಾತಿ, ಉದ್ಯೋಗ ಹಾಗೂ ಮುಂಬಡ್ತಿಗಳಲ್ಲಿ ಮೀಸಲಾತಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗಾಗಿ ಇದರ ಅನುಷ್ಠಾನವನ್ನು ಇನ್ನೂ ಜಾರಿಯಾಗದಿರುವ ಕುರಿತು ಪ್ರಸ್ತಾಪಿಸುವುದು. |

**ಶ್ರೀನಿವಾಸ**
**ಕಾರ್ಯದರ್ಶಿ**

---